**All India Radio: Bangalore**
**National Bulletin In Kannada**
**15.07.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**15.07.2025 1.10 p.m.**

**<><><><>**

ಮುಖ್ಯಾಂಶಗಳು

- ಆಕ್ಸಿಯಮ್-೪ ಯೋಜನೆ; ಇಂದು ಮಧ್ಯಾಹ್ನ ೩ ಗಂಟೆಗೆ ಭೂಮಿಗೆ ಮರಳಲಿರುವ ಗಗನಯಾತ್ರಿಗಳು
- ಚೀನಾ ಅಧ್ಯಕ್ಷರೊಂದಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಮಾತುಕತೆ
- ಉಕ್ರೇನ್ ಜೊತೆ ಶಾಂತಿ ಒಪ್ಪಂದಕ್ಕೆ ರಷ್ಯಾಗೆ ಅಮೆರಿಕಾ ತಾಕೀತು
- ಜಪಾನ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಪಂದ್ಯಾವಳಿ; ಭಾರತದ ಅಭಿಯಾನ ಮುನ್ನಡೆಸಲಿರುವ ಸಾತ್ವಿಕ್ ರಾಂಕಿರೆಡ್ಡಿ, ಚಿರಾಗ್ ಶೆಟ್ಟಿ

<><><><>

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸೇರಿದಂತೆ ಆಕ್ಸಿಯಮ್-೪ ಯೋಜನೆಯ ನಾಲ್ವರು ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ೧೮ ದಿನಗಳನ್ನು ಕಳೆದ ನಂತರ ಇಂದು ಭೂಮಿಗೆ ಮರಳಲಿದ್ದಾರೆ. ಅವರು ನಿನ್ನೆ ಕಕ್ಷೆಯಲ್ಲಿರುವ ಪ್ರಯೋಗಾಲಯವಾದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಖಠಿಚಿಛಿಜಫಿ ಡ್ರ್ಯಾಗನ್‌ನಲ್ಲಿ ಭೂಮಿಗೆ ಸುಮಾರು ೨೨ ಗಂಟೆಗಳ ಪ್ರಯಾಣಕ್ಕಾಗಿ ಯಾನ ಆರಂಭಿಸಿದರು. ಭಾರತೀಯ ಕಾಲಮಾನ ಇಂದು ಮಧ್ಯಾಹ್ನ ೩ ಗಂಟೆಗೆ ಅಮೆರಿಕದ ಕ್ಯಾಲಿಫೋರ್ನಿಯಾ ತಲುಪಲಿದ್ದಾರೆ. ಭೂಮಿಗೆ ಇಳಿದ ನಂತರ, ಗ್ರೂಪ್ ಕ್ಯಾಪ್ಟನ್ ಶುಕ್ಲಾ ಮತ್ತು ಇತರೆ ಗಗನಯಾತ್ರಿಗಳೊಂದಿಗೆ ಭೂಮಿಯ ಗುರುತ್ವಾಕರ್ಷಣೆಗೆ ಹೊಂದಿಕೊಳ್ಳಲು ಫ್ಲೈಟ್ ಸರ್ಜನ್‌ಗಳ ಮೇಲ್ವಿಚಾರಣೆಯಲ್ಲಿ ೭ ದಿನಗಳ ಪುನರ್ವಸತಿ ಕಾರ್ಯಕ್ರಮಕ್ಕೆ ಒಳಗಾಗುತ್ತಾರೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಶುಭಾಂಶು ಶುಕ್ಲಾ ಆಗಿದ್ದಾರೆ. ಅಲ್ಲದೇ ೧೯೮೪ ರಲ್ಲಿ ಬಾಹ್ಯಾಕಾಶಕ್ಕೆ ತೆರಳಿದ್ದ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ನಂತರ ಗ್ರೂಪ್ ಕ್ಯಾಪ್ಟನ್ ಶುಕ್ಲಾ ಎರಡನೇ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಕಾರ್ಯಾಚರಣೆ

ಸಮಯದಲ್ಲಿ, ಶುಭಾಂಶು ಶುಕ್ಲಾ ಭಾರತದ ನಿರ್ದಿಷ್ಟ ಏಳು ಪ್ರಯೋಗಗಳನ್ನು ನಡೆಸಿದರು. ಆಕ್ಸಿಯಮ್-೪ ಕಾರ್ಯಾಚರಣೆಯಲ್ಲಿ ಶುಭಾಂಶು ಶುಕ್ಲಾ ಜೊತೆಗೆ, ಅಮೆರಿಕಾದ ಕಮಾಂಡರ್ ಪೆಗ್ಗಿ ವಿಟ್ಸನ್ ಮತ್ತು ಮಿಷನ್ ತಜ್ಞರಾದ ಪೋಲೆಂಡ್ ಹಾಗೂ ಹಂಗೇರಿಯ ಸ್ಲಾವೋಸ್ಜ್ ಉಜ್ನಾನ್ಸ್ಕಿ-ವಿಸ್ನಿವ್ಸ್ಕಿ ಮತ್ತು ಟಿಬೋರ್ ಕಪು ಅವರನ್ನು ಹೊತ್ತ ಸ್ಪೇಸ್‌ಎಕ್ಸ್ ಫಾಲ್ಕನ್ ೯ ಅನ್ನು ಫ್ಲೋರಿಡಾದ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಜೂನ್ ೨೫ ರಂದು ಉಡಾವಣೆ ಮಾಡಲಾಯಿತು.

<><><>

ಚೀನಾದ ಟಿಯಾಂಜಿನ್ ನಗರದಲ್ಲಿಂದು ನಡೆಯಲಿರುವ ಎಸ್‌ಸಿಒ ವಿದೇಶಾಂಗ ಸಚಿವರ ಸಭೆಯಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಭಾಗವಹಿಸಲಿದ್ದಾರೆ. ಸಭೆಯಲ್ಲಿ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ವಿವಿಧ ಕ್ಷೇತ್ರಗಳಲ್ಲಿ ಎಸ್‌ಸಿಒ ಸಹಕಾರ ಮತ್ತು ಪ್ರಮುಖ ಅಂತಾರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಎಸ್‌ಸಿಒ ಒಕ್ಕೂಟದಲ್ಲಿ ಭಾರತ, ಚೀನಾ, ರಷ್ಯಾ, ಇರಾನ್, ಕಜಾಕಿಸ್ಥಾನ್, ಕಿರ್ಗಿಸ್ಥಾನ್, ಪಾಕಿಸ್ತಾನ, ತಜಾಕಿಸ್ತಾನ್, ಉಜ್ಬೆಕಿಸ್ತಾನ್ ಮತ್ತು ಬೆಲಾರಸ್ ಸೇರಿದಂತೆ ೧೦ ಸದಸ್ಯ ರಾಷ್ಟ್ರಗಳಿವೆ. ಪ್ರಸ್ತುತ ಚೀನಾ ಎಸ್‌ಸಿಒದ ಅಧ್ಯಕ್ಷತೆ ವಹಿಸಿದ್ದು, ಈ ಸಭೆಗಳ ಆತಿಥ್ಯ ವಹಿಸಿದೆ. ಚೀನಾ ಪ್ರವಾಸದಲ್ಲಿರುವ ಡಾ.ಎಸ್.ಜೈಶಂಕರ್ ಬೀಜಿಂಗ್‌ನಲ್ಲಿಂದು ಚೀನಾ ಅಧ್ಯಕ್ಷ ಕ್ಸೀ ಜಿನ್‌ಪಿಂಗ್ ಹಾಗೂ ಇತರೆ ಎಸ್‌ಸಿಒ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಭೇಟಿ ಮಾಡಿದರು. ಸಾಮಾಜಿಕ ಮಾಧ್ಯಮ, ಪೋಸ್ಟ್‌ನಲ್ಲಿ ಡಾ.ಜೈಶಂಕರ್ ಭಾರತ-ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧದ ಇತ್ತೀಚಿನ ಬೆಳವಣಿಗೆಗಳ ಕುರಿತು ಚೀನಾ ಅಧ್ಯಕ್ಷರೊಂದಿಗೆ ಚರ್ಚಿಸಲಾಯಿತು ಎಂದು ಹೇಳಿದ್ದಾರೆ. ಎರಡು ದಿನಗಳ ಭೇಟಿಗಾಗಿ ನಿನ್ನೆ ಬೀಜಿಂಗ್ ತಲುಪಿದ ಸಚಿವರು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಹಾಗೂ ಚೀನಾ ಉಪಾಧ್ಯಕ್ಷ ಹಾನ್ ಝೆಂಗ್ ರವರೊಂದಿಗೆ ಸಭೆ ನಡೆಸಿದರು.

<><><>

ಕೌಶಲ್ಯ ಭಾರತ ಯೋಜನೆಯ ೧೦ನೇ ವಾರ್ಷಿಕೋತ್ಸವವನ್ನು ಇಂದು ಆಚರಿಸಲಾಗುತ್ತಿದೆ. ಉದ್ಯೋಗ, ಉದ್ಯಮಶೀಲತೆ ಮತ್ತು ಸುಸ್ಥಿರ ಜೀವನೋಪಾಯಕ್ಕಾಗಿ ಯುವಕರನ್ನು ಉದ್ಯಮ-ಸಂಬಂಧಿತ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸುವ ಗುರಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ೨೦೧೫ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಪ್ರಾಯೋಗಿಕ, ಉದ್ಯೋಗ-ಸಿದ್ಧ ಕೌಶಲ್ಯಗಳ ಮೂಲಕ ಯುವಕರನ್ನು ಸಬಲೀಕರಣಗೊಳಿಸುವ ಸರ್ಕಾರದ

ಬದ್ಧತೆಯನ್ನು ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವ ಜಯಂತ್ ಚೌಧರಿ ಪುನರುಚ್ಚರಿಸಿದರು. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ, ಕೌಶಲ್ಯ ಭಾರತವು ವಿಶೇಷವಾಗಿ ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಜೀವನವನ್ನು ಪರಿವರ್ತಿಸುತ್ತಲೇ ಇದೆ. ಕೌಶಲ್ಯ ಭಾರತವು ಯುವಕರನ್ನು ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸಲು ಮತ್ತು ಅವರನ್ನು ಉದ್ಯೋಗಕ್ಕೆ ಹೆಚ್ಚು ಅರ್ಹರನ್ನಾಗಿ ಮಾಡಲು ಕೇಂದ್ರ ಸರ್ಕಾರದ ಒಂದು ಉಪಕ್ರಮವಾಗಿದೆ ಎಂದು ಅವರು ಹೇಳಿದರು.

<><><><>

ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ಸ್ಟಾರ್ಟ್‌ಅಪ್ ಇಂಡಿಯಾ ಕಾರ್ಯಕ್ರಮದಡಿಯಲ್ಲಿ ಪ್ರಮುಖ ಉಪಕ್ರಮವಾದ ರಾಷ್ಟ್ರೀಯ ಸ್ಟಾರ್ಟ್‌ಅಪ್ ಪ್ರಶಸ್ತಿಗಳ ಐದನೇ ಆವೃತ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಸರ್ಕಾರದ ಆತ್ಮನಿರ್ಭರ ಭಾರತ್ ದೃಷ್ಟಿಕೋನ ಮತ್ತು ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಗೆ ಅನುಗುಣವಾಗಿ, ಸ್ಟಾರ್ಟ್‌ಅಪ್ ಇಂಡಿಯಾ - ತೆರಿಗೆ ವಿನಾಯಿತಿ, ಹಣಕಾಸು ಪ್ರವೇಶ ಮತ್ತು ಸಾಮರ್ಥ್ಯ ವೃದ್ಧಿಯಂತಹ ಉಪಕ್ರಮಗಳ ಮೂಲಕ, ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸುತ್ತದೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ. ಕೃಷಿ, ಶುದ್ಧ ಇಂಧನ, ಫಿನ್‌ಟೆಕ್, ಏರೋಸ್ಪೇಸ್, ಆರೋಗ್ಯ, ಶಿಕ್ಷಣ, ಸೈಬರ್ ಭದ್ರತೆ ಸೇರಿದಂತೆ ವ್ಯಾಪಕ ಶ್ರೇಣಿಯ ಕ್ಷೇತ್ರಗಳನ್ನು ರಾಷ್ಟ್ರೀಯ ಸ್ಟಾರ್ಟ್‌ಅಪ್ ಪ್ರಶಸ್ತಿಗಳು ಒಳಗೊಂಡಿವೆ. ೨೦೧೬ ರಲ್ಲಿ ಪ್ರಾರಂಭವಾದ ಸ್ಟಾರ್ಟ್‌ಅಪ್ ಇಂಡಿಯಾ, ಭಾರತದ ಉದ್ಯಮಶೀಲತೆ ವಲಯವವನ್ನು ಪರಿವರ್ತಿಸಿದೆ, ನಾವೀನ್ಯತೆಯನ್ನು ಬೆಳೆಸುತ್ತಿದೆ ಹಾಗೂ ಯುವಕರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಮೊದಲ ಬಾರಿಗೆ ಉದ್ಯಮ ಆರಂಭಿಸುವ ಹೊಸಬರನ್ನು ಸಬಲೀಕರಣಗೊಳಿಸಿದೆ.

<><><><>

ರಷ್ಯಾದಿಂದ ತೈಲ, ಅನಿಲ ಮತ್ತು ಯುರೇನಿಯಂ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಹೆಚ್ಚುವರಿಯಾಗಿ ಶೇಕಡ ೧೦೦ ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಉಕ್ರೇನ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸುವಲ್ಲಿ ರಷ್ಯಾದ ನಿಷ್ಠುರತೆಯ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಮೆರಿಕದ ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಷ್ಯಾ ಉಕ್ರೇನ್ ಜೊತೆ ಶಾಂತಿ ಒಪ್ಪಂದ

ಮಾಡಿಕೊಳ್ಳದಿದ್ದರೆ, ದಂಡನಾತ್ಮಕ ಸುಂಕ ಜಾರಿಗೆ ಬರಲು ೫೦ ದಿನಗಳ ಗಡುವು ನೀಡಿದರು. ಸುಂಕ ನೀತಿ ಜಾರಿಗೆ ಬಂದರೆ, ಅಮೆರಿಕದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲು ಮುಂದಾಗಿರುವ ಭಾರತದ ಮೇಲೆ ಪರಿಣಾಮ ಬೀರಲಿದೆ. ರಷ್ಯಾದಿಂದ ಇಂಧನ ಉತ್ಪನ್ನಗಳನ್ನು ಖರೀದಿಸುವ ದೇಶಗಳ ಮೇಲೆ ಶೇಕಡ ೫೦೦ ರಷ್ಟು ಸುಂಕ ವಿಧಿಸುವ ಪ್ರಸ್ತಾವಿತ ಮಸೂದೆಯನ್ನು ಬೆಂಬಲಿಸುವುದಾಗಿ ಡೊನಾಲ್ಡ್ ಟ್ರಂಪ್ ಹೇಳಿದರು. ಇನ್ನೊಂದೆಡೆ, ರಷ್ಯಾದಿಂದ ತೈಲ ಖರೀದಿಯನ್ನು ಭಾರತ ಸಮರ್ಥಿಸಿಕೊಂಡಿದೆ. ರಷ್ಯಾದಿಂದ ತೈಲ ಖರೀದಿಯು ದೇಶದ ಅಭಿವೃದ್ಧಿಗೆ ಅಗತ್ಯವಾಗಿರುತ್ತದೆ ಮತ್ತು ಅಂತಾರಾಷ್ಟ್ರೀಯ ತೈಲ ಬೆಲೆಗಳನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ ಎಂದು ಭಾರತ ಹೇಳಿದೆ.

<><><>

೧೧೪ ವರ್ಷದ ಹಿರಿಯ ಮ್ಯಾರಾಥಾನ್ ಓಟಗಾರ ಫೌಜಾ ಸಿಂಗ್, ಪಂಜಾಬ್‌ನ ಜಲಂಧರ ಜಿಲ್ಲೆಯ ತಮ್ಮ ಸ್ವಂತ ಗ್ರಾಮವಾದ ಬಿಯಾಸ್‌ನಲ್ಲಿ ನಿನ್ನೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ವಯಸ್ಸನ್ನು ಮೀರಿದ ದೈಹಿಕ ಶಕ್ತಿಯೊಂದಿಗೆ ವಿಶ್ವದ ಗಮನ ಸೆಳೆದಿದ್ದ ಫೌಜಾ ಸಿಂಗ್, ವಿಶಿಷ್ಟ ವ್ಯಕ್ತಿತ್ವದ ಅಸಾಧಾರಣ ವ್ಯಕ್ತಿಯಾಗಿದ್ದರು. ಆರೋಗ್ಯ ಹಾಗೂ ದೈಹಿಕ ಶಕ್ತಿ ಕುರಿತಂತೆ ದೇಶದ ಯುವಜನರಿಗೆ ಅವರು ಸದಾ ಪ್ರೇರಣೆಯಾಗಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

<><><>

ಎರಡು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ರಾಜಸ್ಥಾನದ ಕೆಲವು ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿ ಎದುರಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಜನಜೀವನ ಅಸ್ಥವ್ಯಸ್ಥಗೊಂಡಿದ್ದು ಪಾಲಿ, ಕೋಟಾ, ಬುಂಡಿ ಮತ್ತು ಜೋದ್ ಪುರದಂತಹ ಪ್ರದೇಶಗಳು ಜಲಾವೃತಗೊಂಡಿದೆ. ಕಳೆದ ಎರಡು ದಿನಗಳಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ೧೨ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದು, ಕೋಟಾದಲ್ಲಿ ೬ ಮಂದಿ ಯುವಕರು ಚಂಬಲ್ ನದಿಯಲ್ಲಿ ಕೊಚ್ಚಿ ಹೋಗಿದ್ದಾರೆ. ಹವಾಮಾನ ಇಲಾಖೆ ಪ್ರಕಾರ ಇನ್ನೂ ಎರಡು ದಿನಗಳವರೆಗೆ ಭಾರೀ ಮಳೆಯ ಮುನ್ಸೂಚನೆ ಇದೆ.

<><><>

ವಾಣಿಜ್ಯ ನಗರಿ ಮುಂಬೈನ ಷೇರು ಮಾರುಕಟ್ಟೆಯ ಕಟ್ಟಡದಲ್ಲಿ ೪ ಆರ್‌ಡಿಎಕ್ಸ್ ಬಾಂಬ್ ಇಡಲಾಗಿದೆ ಎಂಬ ಹುಸಿ ಕರೆ ಬಂದಿದೆ. ಪೊಲೀಸರು ಶೋಧ ಕಾರ್ಯಾಚರಣೆ ನಡೆಸಿ, ಇದು

ಪರಿಶೀಲನೆ ಬಳಿಕ ಹುಸಿ ಕರೆ ಎಂದು ತಿಳಿದು ಬಂದಿದೆ. ಬಿಎಸ್‌ಇ ತನ್ನ ಅಧಿಕೃತ ಜಾಲತಾಣದಲ್ಲಿ ಬೆದರಿಕೆ ಇಮೇಲ್ ಸ್ವೀಕರಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

<><><><>

ಜಪಾನ್ ಓಪನ್ ಟೋಕಿಯೋನಲ್ಲಿ ಇಂದು ಆರಂಭವಾಗುವ ಜಪಾನ್ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಭಾರತದ ಅಭಿಯಾನವನ್ನು ಮುನ್ನಡೆಸಲಿದ್ದಾರೆ. ವಿಶ್ವ ೧೫ನೇ ಶ್ರೇಯಾಂಕಿತ ಜೋಡಿ, ಈ ವರ್ಷ ಮೊದಲ ಪ್ರಶಸ್ತಿ ಗೆಲ್ಲುವ ತವಕದಲ್ಲಿದೆ. ಅವರು ನಾಳೆ ಕೊರಿಯಾದ ಕಾಂಗ್ ಮಿನ್ ಹ್ಯೂಕು ಮತ್ತು ಕಿ ಡಾಂಗ್ ಜು ಜೋಡಿಯ ವಿರುದ್ಧ ತಮ್ಮ ಮೊದಲ ಪಂದ್ಯ ಆಡಲಿದ್ದಾರೆ. ೧೮ನೇ ಶ್ರೇಯಾಂಕಿತ ಲಕ್ಷ್ಯ ಸೇನ್, ಚೀನಾದ ವಾಂಗ್ ಝೆಂಗ್ ಜಿಂಗ್ ವಿರುದ್ಧ ತಮ್ಮ ಆರಂಭಿಕ ಪಂದ್ಯ ಆಡಲಿದ್ದಾರೆ. ೧೬ನೇ ಶ್ರೇಯಾಂಕಿತ ಪಿ.ವಿ.ಸಿಂಧು, ಕೊರಿಯಾದ ಸಿಮ್ ಯು ಜಿನ್ ವಿರುದ್ಧ ಸೆಣಸಾಟ ನಡೆಸಲಿದ್ದಾರೆ. ಯುವ ಆಟಗಾರ್ತಿ ಉನ್ನತಿ ಹುಡಾ, ಥೈಲ್ಯಾಂಡ್‌ನ ಪೋರ್ನ್ ಪಾವಿ ಚೋಚುವಾಂಗ್ ವಿರುದ್ಧ ಸ್ಪರ್ಧಿಸಲಿದ್ದಾರೆ. ಇನ್ನೊಂದು ಸಿಂಗಲ್ಸ್ ಪಂದ್ಯದಲ್ಲಿ ಅನುಪಮಾ ಉಪಾಧ್ಯಾಯ ಅವರು ಮತ್ತು ರಕ್ಷಿತಾ ರಾಮ್‌ರಾಜ್ ಮುಖಾಮುಖಿಯಾಗಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಹರಿಹರನ್ ಅಂಸಕರುಣನ್ ಮತ್ತು ರುಬನ್ ಕುಮಾರ್ ಜೋಡಿ ಕೊರಿಯಾದ ಮೂರನೇ ಶ್ರೇಯಾಂಕಿತ ಕಿಮ್ ವಾನ್ ಹೋ ಮತ್ತು ಸಿಯೋ ಸುಂಗ್ ಜೆ ಜೋಡಿಯನ್ನು ಎದುರಿಸಲಿದೆ.  ಮಹಿಳಾ ಡಬಲ್ಸ್‌ನಲ್ಲಿ ಕವಿಪ್ರಿಯಾ ಸೆಲ್ವಂ ಮತ್ತು ಸಿಮ್ರನ್ ಸಿಂಗ್‌ಹಿ ಜೋಡಿ, ಹಾಂಗ್‌ಕಾಂಗ್‌ನ ಲುಯ್ ಲಾಕ್ ಮತ್ತು ತ್ಸಾಂಗ್ ಹಿಯು ಯಾನ್ ವಿರುದ್ಧ ಹಾಗೂ ರೂಪರ್ಣಾ ಮತ್ತು ಶ್ವೇತಪರ್ಣಾ ಜೋಡಿ ಜಪಾನ್‌ನ ಕೊಕೊನಾ ಇಶಿಕಾವಾ ಮತ್ತು ಮಾಯಿಕೊ ಕವಾಜೊಯೆ ಜೋಡಿ ವಿರುದ್ಧ ಕಣಕ್ಕಿಳಿಯಲಿದೆ. ಈ ಬಾರಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತೀಯ ಆಟಗಾರರು ಭಾಗವಹಿಸುತ್ತಿಲ್ಲ.

<><><><>

ಜಾರ್ಜಿಯಾದ ಬಟುಮಿ ನಗರದಲ್ಲಿ ನಡೆಯುತ್ತಿರುವ ಫಿಡೆ ಮಹಿಳಾ ವಿಶ್ವಕಪ್ ಚೆಸ್ ಸ್ಪರ್ಧೆಯಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಆರ್.ವೈಶಾಲಿ ಮತ್ತು ಹರಿಕಾ ದ್ರೋಣವಳ್ಳಿ ತೀವ್ರ ಪೈಪೋಟಿಯ ಪಂದ್ಯಗಳನ್ನು ಗೆದ್ದು ಕ್ವಾರ್ಟರ್‌ಫೈನಲ್-ಪೂರ್ವ ಹಂತವನ್ನು ತಲುಪಿದ್ದಾರೆ.

ಭಾರತದ ಕೊನೆರು ಹಂಪಿ ಮತ್ತು ದಿವ್ಯಾ ದೇಶ್ಮುಖ್ ಈಗಾಗಲೇ ಮುಂದಿನ ಸುತ್ತಿಗೆ ಪ್ರವೇಶ ಪಡೆದಿದ್ದಾರೆ. ವೈಶಾಲಿ, ಅಮೆರಿಕದ ಕ್ಯಾರಿಸ್ಸಾಯಿಪ್ ವಿರುದ್ಧ ೧೦+೧೦ ರ್ಯಾಪಿಡ್ ಟೈ ಬ್ರೆಕ್‌ನಲ್ಲಿ ಗೆಲುವು ಸಾಧಿಸಿದರು. ಕ್ವಾರ್ಟರ್‌ಫೈನಲ್-ಪೂರ್ವ ಹಂತದಲ್ಲಿ ಅವರು, ಕಝಾಕಿಸ್ತಾನದ ಮೆರೂಯರ್ಟ್ ಕಮಲಿಡೆನೋವಾ ಎದುರು ಕಣಕ್ಕಿಳಿಯಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>